# ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೂದುವಳ್ಳಿ

- **ವಿಳಾಸ**: ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೂದುವಳ್ಳಿ

  ವಸ್ತಾರೆ ಕ್ಲಸ್ಟರ್, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ,

- **ಮುಖ್ಯ ಶಿಕ್ಷಕರ ಹೆಸ**ರು: ಜಯಮ್ಮ S.P

- **ಮುಖ್ಯ ಶಿಕ್ಷಕರ ದೂರವಾಣಿ**: 9449557124,9880229309

- **ಶಾಲಾ ಇ ಮೇಲ್ ವಿಳಾಸ**:glpskuduvalli@gmail.com

## 2. ಶಾಲೆಯ ಭಾವಚಿತ್ರ ಮತ್ತು ವಿವರಣೆ:



ನಾವಿಡುವ ಮೊದಲ ಹೆಜ್ಜೆ ಸಾವಿರ ಮೈಲಿಗಳ ಪಯಣಕೆ ನಾಂದಿಯಾಗುವುದೆಂಬಂತೆ ಶಾಲೆಯ ಭೌತಿಕ ಹಾಗೂ ಶೈಕ್ಷಣಿಕ ಬದಲಾವಣೆಗೆ ಪಣತೊಟ್ಟ ಶಿಕ್ಷಕರ ಪರಿಶ್ರಮ ಶಾಲೆಯ ಚಿತ್ರಣವೆ ಬದಲಾದ ನಿದರ್ಶನ.



**ಜಾನಪದ ಶೈಲಿಯ ಸೊಗಡನ್ನು ಬಿಂಬಿಸುವ ಹೊರಗೋಡೆಯ ಚಿತ್ತಾರ:**

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ಕೂದುವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ. ಚಿಕ್ಕಮಗಳೂರು-ಶೃಂಗೇರಿ ಮುಖ್ಯ ರಸ್ತೆಯಿಂದ ಸುಮಾರು ಎರಡು ಕಿ.ಮೀ ಒಳಗಿರುವ ಈ ಸುಂದರ ಶಾಲೆ ಸುತ್ತಲೂ ಮರಗಳು,ಆಟದ ಮೈದಾನ,ಶಾಲಾ ಮುಂಭಾಗದಲ್ಲಿ ಅಲಂಕಾರಿಕ ಗಿಡಗಳಿಂದ ಕೂಡಿದ ಸುಂದರ ಪರಿಸರದಲ್ಲಿದೆ.

## 3.ಶಾಲೆಯ ಪ್ರಾರಂಭ ಮತ್ತು ಸರ್ವತೋಮುಖ ಬೆಳವಣಿಗೆ:

ಮಕ್ಕಳ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಮಕ್ಕಳು ಮತ್ತು ಪೋಷಕರನ್ನು ಆಕರ್ಷಿಸುವ ದೃಷ್ಟಿಯಿಂದ ಶಾಲೆಯನ್ನು ಆಕರ್ಷಕ ವಾಗಿ ಮಾಡುವುದು ಹಾಗೂ ಮಕ್ಕಳಿಗೆ ಉತ್ತಮ

ಅಭ್ಯಾಸಗಳನ್ನೂ ಅಳವಡಿಸಿಕೊಳ್ಳುವಂತೆ ಮಾಡುವುದು ಹಾಗೂ ಅವರ ಜೀವನವನ್ನು ಉಜ್ವಲವಾಗಿ ರೂಪಿಸುವ ನಿಟ್ಟಿನಲ್ಲಿ ಶಾಲೆಯ ನವೀಕರಣ ಯೋಜನೆ ರೂಪಿಸಲಾಯಿತು .



**ಶಾಲೆ ಬೆಳೆದು ಬಂದ ಚಿತ್ರಣ**


ಈ ಶಾಲೆ ಮೊದಲಿಗೆ ಒಂದು ಬಾಡಿಗೆ ಮನೆಯಲ್ಲಿ 1972 ರಲ್ಲಿ ಪ್ರಾರಂಭವಾಗಿದ್ದು ,ನಂತರ ಸರ್ಕಾರಿ ಜಾಗದಲ್ಲಿ ಒಂದು ಕೊಠಡಿಯೊಂದಿಗೆ ಶುರುವಾಯಿತು.ಹಂತ ಹಂತವಾಗಿ ಸದ್ಯ ಮೂರು ಕೊಠಡಿಗಳೊಂದಿಗೆ ಶಾಲೆ ನಡೆಯುತ್ತಿದೆ.ಹಲವು ವರ್ಷಗಳಿಂದ ಸುಣ್ಣ ಬಣ್ಣ ಕಾಣದೆ ಇದ್ದಂತಹ ಶಾಲೆ ಎಸ್.ಡಿ.ಎಂ.ಸಿ ,ಗ್ರಾಮಸ್ಥರು ,ಹಾಗೂ ಯುವಕ ಸಂಘದ ಸಹಕಾರದಿಂದ ಮೊದಲಿಗೆ ಶಾಲೆಗೆ ಸುಣ್ಣ ಬಣ್ಣ ಹಚ್ಚಿಸುವ ಕಾರ್ಯಕ್ಕೆ ಕೈ ಹಾಕಿದೆವು.ಶಾಲೆಯ ಇಬ್ಬರು ಶಿಕ್ಷಕರ ಧನ ಸಹಾಯದಿಂದ ಗೋಡೆಗಳ ಮೇಲೆ ಜಾನಪದ ಶೈಲಿಯ ಚಿತ್ತಾಕರ್ಷಕ ಚಿತ್ರಗಳ ಚಿತ್ರಿಸಲಾಯಿತು,ನಾವು ಅಂದುಕೊಂಡದ್ದಕ್ಕಿಂತ ಉತ್ತಮವಾಗಿ ಜಾನಪದ ಸೊಗಡನ್ನು ಬಿಂಬಿಸುವ ಚಿತ್ರಗಳ ಚಿತ್ತಾರದೊಂದಿಗೆ ಶಾಲೆಯು ಆಕರ್ಷಣೀಯವಾಗಿ ಸುಂದರವಾಗಿ ಮದುವಣಗಿತ್ತಿಯಂತೆ ಶೃಂಗಾರಗೊಂಡಿತು.



ಇನ್ನರ್ ವೀಲ್ ಕ್ಲಬ್ ಅವರಿಂದ ಕೊಡುಗೆ

ಇನ್ನರ್ ವೀಲ್ ಕ್ಲಬ್ ಆಫ್ ಚಿಕ್ಕಮಗಳೂರು ಅವರಿಂದ ವಾಟರ್ ಪ್ಯೂರಿಫೈಯರ್,ಗ್ರೀನ್ ಬೋರ್ಡ್,ಸ್ಮಾರ್ಟ್ ಟಿ.ವಿ,ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್ ಮತ್ತು ಲೇಖನ ಸಾಮಗ್ರಿಗಳು, ITO ಚಿಕ್ಕಮಗಳೂರು ಅವರು ಕ್ರೀಡಾ ಸಾಮಗ್ರಿಗಳು, ಇಂಟರ್ ನೆಟ್ ಸರ್ವೀಸ್ ಪ್ರೋವೈಡರ್ , ಚಿಕ್ಕಮಗಳೂರಿನ ಪರಮೇಶ್ ರವರು ಒಂದು ವರ್ಷಕ್ಕೆ ಉಚಿತ ವೈ ಫೈ ಸೇವೆ ಶಾಲೆಗೆ ನೀಡಿದ್ದಾರೆ,ಹೀಗೆ ನಮ್ಮ ಶಾಲೆಯು ದಿನದಿಂದ ದಿನಕ್ಕೆ ಭೌತಿಕ ಸೌಲಭ್ಯಗಳನ್ನು ನೀಡುವಲ್ಲಿ ಯಶಸ್ವಿಯಾಗುತ್ತಿದೆ.

* 1 ನೇ ತರಗತಿ ದಾಖಲಾತಿಯಲ್ಲಿ ಏರಿಕೆ



ಮಕ್ಕಳ ಕಲಿಕೆಗೆ ಪೂರಕವಾಗುವಂತೆ ಶಾಲೆಯಲ್ಲಿ ಕಲಿಕಾ ವಾತಾವರಣವನ್ನು ನಿರ್ಮಿಸಿರುವುದರಿಂದ ಒಂದನೇ ತರಗತಿ ದಾಖಲಾತಿಯಲ್ಲಿ ನಿಯಮಿತ ಹೆಚ್ಚಳವನ್ನು ಕಾಣಬಹುದಾಗಿದೆ


## 4. ವಿದ್ಯಾರ್ಥಿಗಳ ಕಲಿಕಾ ಪ್ರಗತಿ:

ನಮ್ಮ ಶಾಲೆಯ ಮಕ್ಕಳು ಗಣಿತ ಕಲಿಕಾ ಆಂದೋಲನ ಸ್ಪರ್ಧೆಯಲ್ಲಿ ಹಾಗೂ ಪ್ರತಿಭಾ ಕಾರಂಜಿಯ ಸ್ಪರ್ಧೆಗಳಲ್ಲಿ ಪ್ರತಿ ವರ್ಷ ಅತಿ ಹೆಚ್ಚು ಬಹುಮಾನಗಳನ್ನು ಗಳಿಸಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಡುವುದನ್ನು ತಪ್ಪಿಸಲು ಹಾಗೂ ಪೋಷಕರ ಆರ್ಥಿಕ ಹೊರೆಯನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ನವೋದಯ,ಮುರಾರ್ಜಿ ದೇಸಾಯಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಪ್ರತಿಷ್ಠಿತ ಯೋಜನೆಯ ವಸತಿ ಶಾಲೆಗಳ ಪ್ರವೇಶ ಪರೀಕ್ಷೆಗಳಿಗೆ ಇಬ್ಬರೂ ಶಿಕ್ಷಕರು ಸಂಜೆ ಶಾಲಾ ಅವಧಿಯ ನಂತರ 1 ಗಂಟೆಯ ವಿಶೇಷ ತರಗತಿಗಳನ್ನು ಪ್ರತಿ ದಿನ ತೆಗೆದುಕೊಳ್ಳುತ್ತಾರೆ. 2020-21 ರಲ್ಲಿ 5 ಮಕ್ಕಳು 2021=22 ರಲ್ಲಿ 6 ಮಕ್ಕಳು 2022-23ರಲ್ಲಿ 7 ಮಕ್ಕಳು 2023-24 ರಲ್ಲಿ 7 ಮಕ್ಕಳು ಮುರಾರ್ಜಿ ಶಾಲೆಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಪ್ರತಿಷ್ಠಿತ ಯೋಜನೆಯ ವಸತಿ ಶಾಲೆಗಳಿಗೆ 2021-22 ರಲ್ಲಿ ಇಬ್ಬರು ಮಕ್ಕಳು 2023-24 ರಲ್ಲಿ 1 ಮಗು ಆಯ್ಕೆಯಾಗಿದ್ದು ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

## ಮುರಾರ್ಜಿ ಶಾಲೆ ಹಾಗೂ ಪ್ರತಿಷ್ಠಿತ  ವಸತಿ ಶಾಲೆಗಳಿಗೆ ಆಯ್ಕೆಯಾದ ಮಕ್ಕಳ ವಿವರ.




## ಸ್ಮಾರ್ಟ್ ಕ್ಲಾಸ್ ಮೂಲಕ ಕಲಿಕೆ



ಮಕ್ಕಳ ಕಲಿಕೆಯನ್ನು ಪರಿಣಾಮಕಾರಿಯಾಗಿಸಲು  ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಸ್ಮಾರ್ಟ್ ಕ್ಲಾಸ್ ಮೂಲಕ ಕಲಿಸಲಾಗುತ್ತಿದೆ.

## 5. ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯ ಹೆಚ್ಚಿಸಲು ಹಾಗೂ ಕಲಿಕಾ ಬೋಧನಾ ಚಟುವಟಿಕೆಯಲ್ಲಿ ಹಮ್ಮಿಕೊಂಡ ನಾವಿನ್ಯಯುತ ಚಟುವಟಿಕೆಗಳು.

ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸಲು ಚಟುವಟಿಕೆಗಳ ಮೂಲಕ ಕಲಿಕೆಗೆ ಪ್ರೇರೇಪಿಸಲಾಗುತ್ತಿದೆ. ಪದಗಳನ್ನು ಹುಡುಕುವುದು ಅಕ್ಷರಗಳ ಮಿಂಚು ಪಟ್ಟಿಗಳ ಸಹಾಯದಿಂದ ಪದಗಳ ರಚನೆ ಪದಗಳನ್ನು ಗುರುತಿಸುವುದು ಸರಳ ವಾಕ್ಯಗಳನ್ನು ಗುರುತಿಸಿ ಓದುವುದು, ಸರಳ ಕಥೆ ಪುಸ್ತಕಗಳನ್ನು ನಿರರ್ಗಳವಾಗಿ ಓದುವ ಚಟುವಟಿಕೆಗಳನ್ನು ಮಾಡಿಸುವುದರ ಮೂಲಕ ಕನ್ನಡದ ಬುನಾದಿ ಸಾಮರ್ಥ್ಯ ಹೆಚ್ಚಿಸಲಾಗಿದೆ.



ಕನ್ನಡ ಬುನಾದಿ ಸಾಮರ್ಥ್ಯ ಮತ್ತು **ಗಣಿತ ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸುವ** ಚಟುವಟಿಕೆಗಳು

ಸಂಖ್ಯೆಗಳ ಪರಿಕಲ್ಪನೆ ಮೂಡಿಸುವ ಚಟುವಟಿಕೆ, ಸ್ಥಾನಬೆಲೆ ಕೋಷ್ಟಕದ ರಚನೆ,ಆಟಿಕೆ ಸಾಮಾನುಗಳನ್ನು/ನೋಟುಗಳನ್ನು ಕೊಟ್ಟು ಲೆಕ್ಕ ಬಗೆಹರಿಸುವ ಚಟುವಟಿಕೆಗಳ ಮೂಲಕ ಗಣಿತದಲ್ಲಿ ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರೇರೇಪಿಸಲಾಗುತ್ತಿದೆ.

**<u>ಕಲಿಕಾ ಬೋಧನಾ ಚಟುವಟಿಕೆಯಲ್ಲಿ ಹಮ್ಮಿಕೊಂಡ ನಾವಿನ್ಯಯುತ ಚಟುವಟಿಕೆಗಳು</u>**




ಮಾಡಿ ಕಲಿ ಚಟುವಟಿಕೆಗಳು,ಕ್ರಾಫ್ಟ್,ಚಟುವಟಿಕೆ ಮೂಲಕ ಕಲಿಕೆ,ಆಟದೊಂದಿಗೆ ಪಾಠ ವಿವಿಧ ರೀತಿಯ ನಾವಿನ್ಯಯುತ ಚಟುವಟಿಕೆಗಳ ಮೂಲಕ ಕಲಿಕಾ ಬೋಧನಾ ಪ್ರಕ್ರಿಯೆಯನ್ನು ಪರಿಣಾಮಕಾರಿಯನ್ನಾಗಿಸಲಾಗಿದೆ.

## 6.ಶಾಲಾ ಭೌತಿಕ ಪರಿಸರ, ಶಾಲಾ ಮೈದಾನ,ಕುಡಿಯುವ ನೀರು,ಶೌಚಾಲಯ ಇನ್ನಿತರ ಸೌಲಭ್ಯಗಳು.

ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಹೆಚ್ಚಿಸುವಲ್ಲಿ,ಕಲಿಕಾ ವಾತಾವರಣವನ್ನುರೂಪಿಸುವಲ್ಲಿ ಶಾಲಾ ಭೌತಿಕ ಪರಿಸರವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶಾಲೆಯು ಉತ್ತಮವಾದ ಶಾಲಾ ಕಟ್ಟಡವನ್ನು ಹೊಂದಿದ್ದು ಮೂರು ಕೊಠಡಿಗಳಿಗೆ ಫ್ಯಾನ್ ವ್ಯವಸ್ಥೆಯನ್ನು ಹೊಂದಿರುವ ಉತ್ತಮವಾದ ಗಾಳಿ ಬೆಳಕನ್ನು ಹೊಂದಿರುವ ಆಕರ್ಷಕ ಕಾರ್ಟೂನ್ ಚಿತ್ರಗಳಿಂದ ಕೂಡಿರುವ ತರಗತಿ ಕೊಠಡಿಗಳು,ಶಾಲಾ ಮುಂಭಾಗದಲ್ಲಿರುವ ಅಲಂಕಾರಿಕ ಗಿಡಗಳು,ಹ್ಯಾಂಗಿಂಗ್ ಪಾಟ್ ನಲ್ಲಿರುವ ಅಲಂಕಾರಿಕ ಗಿಡಗಳು ಶಾಲೆಯ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ.

## ತರಗತಿ ಹಾಗೂ ಕೊಠಡಿಗಳು ಹಾಗೂ ಅಲಂಕಾರಿಕ ಗಿಡಗಳು



ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಸುಸಜ್ಜಿತ ಹೈಟೆಕ್ ಶೌಚಾಲಯ,2000 ಲೀಟರ್ ನೀರು ಸಂಗ್ರಹಿಸುವಷ್ಟು ಸಿಂಟೆಕ್ಸ್ ವ್ಯವಸ್ಥೆಯನ್ನು ಹೊಂದಿದ್ದು,15 ಲೀಟರ್ ನೀರು ಸಂಗ್ರಹಿಸುವಷ್ಟು ವಾಟರ್ ಪ್ಯೂರಿಫೈರ್ ನಿಂದ ಅಕ್ಷರ ದಾಸೋಹಕ್ಕೆ ಹಾಗೂ ಮಕ್ಕಳಿಗೆ ಉತ್ತಮವಾದ ಕುಡಿಯುವ ನೀರಿನ ಸೌಲಭ್ಯವನ್ನು,ಮಕ್ಕಳಿಗೆ ಕೈ ತೊಳೆಯಲು 5 ನಲ್ಲಿಗಳ ಸಹಿತ ವಾಶ್ ಬೇಸಿನ್ ನಿರ್ಮಾಣ ಮಾಡಲಾಗಿದ್ದು,ಮಕ್ಕಳು ಕೈತೊಳೆಯಲು,ಊಟದ ತಟ್ಟೆ ತೊಳೆಯಲು ಅನುಕೂಲ ಮಾಡಿಕೊಡಲಾಗಿದೆ.



**ಸುಸಜ್ಜಿತ ಹೈಟೆಕ್ ಶೌಚಾಲಯ**



**ಕೈ ತೊಳೆಯಲು ವಾಶ್ ಬೇಸಿನ್**

ಮೂರು ಎಕರೆ ವಿಶಾಲವಾದ ಆಟದ ಮೈದಾನವನ್ನು ಹೊಂದಿದ್ದು ಪುಟಾಣಿ ಮಕ್ಕಳನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಚುರುಕುಗೊಳಿಸುವಂತಹ ಚೆಸ್,ಕೇರಂ ಬೋರ್ಡ್,ಸ್ಕಿಪ್ಪಿಂಗ್ ರೋಪ್, ಟೆನಿಕಾಯ್ಟ್,ವಾಲಿಬಾಲ್, ಫುಟ್ಬಾಲ್ ಎಲ್ಲಾ ರೀತಿಯ ಕ್ರೀಡಾ ಸಾಮಗ್ರಿಗಳನ್ನು ಉಪಯೋಗಿಸಿ ಸಂತಸದಿಂದ ಆಟ ಆಡುತ್ತಿದ್ದಾರೆ. ಎಸ್ ಡಿ ಎಂ ಸಿ ಹಾಗೂ ಪೋಷಕರ ಸಹಕಾರದಿಂದ ಶಾಲಾ ಕೈತೋಟ ನಿರ್ಮಾಣ ಮಾಡಲಾಗಿದ್ದು ಮಕ್ಕಳು ವಿವಿಧ ರೀತಿಯ ತರಕಾರಿಗಳು,ಕರಿಬೇವು, ನುಗ್ಗೆಕಾಯಿ,ಪಪ್ಪಾಯ,ಬಾಳೆ,ತೆಂಗು ನಿಂಬೆ ಗಿಡಗಳನ್ನು ಬೆಳೆಸಿದ್ದಾರೆ.. ಪ್ರಾಯೋಗಿಕ ಕಲಿಕೆಯ ಭಾಗವಾಗಿ ಪ್ರತಿ ಮಗುವಿಗೆ ಕೈತೋಟದ ಗಿಡಗಳ ಆರೈಕೆಯ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದೆ





ಆಟದ ಮೈದಾನ                ಶಾಲಾ ಕೈತೋಟ

## 7.ನಾವೀನ್ಯಯುತವಾಗಿ ತರಗತಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ಉಪಕ್ರಮಗಳು.

ಒಬ್ಬ ವ್ಯಕ್ತಿ ಹೆಚ್ಚು ಯಶಸ್ವಿಯಾಗಲು ಅವರ ಜೀವನದಲ್ಲಿ ಅಳವಡಿಸಿಕೊಂಡ ಉತ್ತಮ ಅಭ್ಯಾಸಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ,ಹಾಗೆಯೆ ಅವರು ಪಡೆದ ಶಿಕ್ಷಣವು ಉನ್ನತ ವಾದದ್ದನ್ನು ಸಾಧಿಸಲು

ಸಹಾಯಕ.ಉತ್ತಮ ಅಭ್ಯಾಸಗಳನ್ನು  ರೂಪಿಸುವಲ್ಲಿ ಮನೆ ಹಾಗೂ ಪೋಷಕರ ಪಾತ್ರ ಎಷ್ಟು ಮುಖ್ಯವೋ ಶಾಲೆ ಹಾಗೂ ಶಿಕ್ಷಕರ  ಪಾತ್ರ ಅಷ್ಟೇ ಮುಖ್ಯವಾದದ್ದು. ಶೈಕ್ಷಣಿಕ ಕಲಿಕೆಯ ಜೊತೆಗೆ ಸ್ವಾವಲಂಬನೆ ಸಂಸ್ಕಾರ ಉತ್ತಮ ಅಭ್ಯಾಸಗಳನ್ನು ರೂಢಿಸುವ ಸಲುವಾಗಿ ಕೆಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ

**1)"ಟ್ರೂ ಶಾಪ್" (ಸತ್ಯದ ಅಂಗಡಿ)**

**2) "ಟ್ರೂ ಸ್ಕೂಲ್ ಬ್ಯಾಂಕ್"**


**3) ಪ್ರಾರ್ಥನಾ ಸಮಯದ ವಿನೂತನ ಅಭ್ಯಾಸಗಳು.**

**1.ಟ್ರೂ ಶಾಪ್ (ಸತ್ಯದ ಅಂಗಡಿ)**

**ಈ ಹೆಸರಿನಲ್ಲಿ ವಿನೂತನ ಮಾದರಿಯ ಅಂಗಡಿಯನ್ನು ಕಳೆದ ಎರಡು ವರ್ಷಗಳಿಂದ ತೆರೆದು ನಿರ್ವಹಣೆ ಮಾಡಲಾಗುತ್ತಿದೆ . ಇದರ ಮುಖ್ಯ ಉದ್ದೇಶ ವಿದ್ಯಾರ್ಥಿಗಳಲ್ಲಿ  ಸತ್ಯನಿಷ್ಠೆ ಪ್ರಾಮಾಣಿಕತೆಯನ್ನು ಬೆಳೆಸುವುದೇ ಆಗಿದೆ. ಅಂಗಡಿಯಲ್ಲಿ ಪೆನ್ಸಿಲ್ ರಬ್ಬರ್ ಶಾರ್ಪ್'ನರ್ ಪೆನ್ ಸ್ಕೇಲ್ ನೋಟ್ ಬುಕ್ಸ್ ಕ್ರಯಾನ್ಸ್ ಗಳು ದೊರೆಯುತ್ತವೆ.**






**ನಮ್ಮ ಅಂಗಡಿಯಲ್ಲಿ ಉಚಿತವೂ ಇದೆ..!!**





ಅಂಗಡಿಯ ವಿಶೇಷತೆಗಳೆಂದರೆ ಯಾವುದೇ ಮಾರಾಟಗಾರರ ವ್ಯವಸ್ಥೆ ಇರುವುದಿಲ್ಲ,ಪ್ರತಿಯೊಂದು ವಸ್ತುವಿನ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ,ಮಕ್ಕಳಿಗೆ ಬೇಕಾದ ವಸ್ತುಗಳನ್ನು ಅವರೇ ಸ್ವತಃ ತೆಗೆದುಕೊಂಡು ಅಲ್ಲಿರುವ ಹಣದ ಡಬ್ಬಿ(ಕ್ಯಾಶ್ ಬಾಕ್ಸ್ )ಗೆ ಹಾಕುತ್ತಾರೆ.ಯಾವ ವಸ್ತುವನ್ನು ಬೇಕಿದ್ದರೂ ಕೊಂಡುಕೊಳ್ಳಬಹುದು,ಒಂದು ವೇಳೆ ಹಣ ಇಲ್ಲದಿದ್ದರೂ ವಸ್ತುಗಳನ್ನು ಪಡೆದುಕೊಳ್ಳಬಹುದು,ಬಾಕಿ ಮಾಡಿದ ಆ ಮೊತ್ತವನ್ನು,ಮರುದಿನ ಅಥವಾ ಯಾವಾಗ ಹಣವಿರುತ್ತದೆಯೋ ಆಗ ಅಲ್ಲಿರುವ ಡಬ್ಬಿಯಲ್ಲಿ ಹಾಕಬಹುದು. ಈ **ಟ್ರೂ ಶಾಪ್** ವ್ಯವಹಾರ ಜ್ಞಾನವನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ ,ಗಣಿತದ ಮೂಲಕ್ರಿಯೆಗಳಾದ ಕೂಡುವುದು ಕಳೆಯುವುದು ಗುಣಾಕಾರ ಭಾಗಾಕಾರ ಗಳ ಜ್ಞಾನ ವೃದ್ಧಿಸಿ,ಹಣದ ಪರಿಕಲ್ಪನೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.ಪ್ರಾಮಾಣಿಕತೆಯ ಮಾರ್ಗದಲ್ಲಿ ಕೊಂಡೊಯ್ಯಬೇಕು ಎನ್ನುವ ಸಂದೇಶ ಈ ಟ್ರೂಶಾಪ್ ಹಿಂದಿದೆ.

## 2.ಟ್ರೂ ಸ್ಕೂಲ್ ಬ್ಯಾಂಕ್[TRUE SCHOOL BANK]

ಟ್ರೂ ಸ್ಕೂಲ್ ಬ್ಯಾಂಕ್"ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳಿಗೋಸ್ಕರ"ವೇ ನಡೆಯುತ್ತಿರುವ ಬ್ಯಾಂಕ್, ಇದು ವಿದ್ಯಾರ್ಥಿಗಳು ತಮ್ಮ ಪಾಕೆಟ್ ಮನಿಯನ್ನು ಸೇವ್ ಮಾಡುತ್ತಾ ಜೊತೆಗೆ ಬ್ಯಾಂಕಿಂಗ್ ವ್ಯವಹಾರವನ್ನು ಕಲಿಯುತ್ತಿರುವ ಒಂದು ಅದ್ಭುತ ಪರಿಕಲ್ಪನೆ.ಬ್ಯಾಂಕ್ ನ ಕಾರ್ಯವೈಖರಿ ಎಂದರೆ ಶಾಲೆಯಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಈ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿದ್ದಾರೆ,

ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕ ಖಾತೆ ಸಂಖ್ಯೆ ಹಾಗೂ ಪಾಸ್ ಪುಸ್ತಕ ನೀಡಲಾಗಿದೆ, ಹಣ ಕಟ್ಟುವ ಮತ್ತು ಹಿಂಪಡೆಯುವ ಪ್ರತಿ ವ್ಯವಹಾರವನ್ನು ಲೆಡ್ಜರ್ ಹಾಗೂ ಪಾಸ್ ಪುಸ್ತಕದಲ್ಲಿ ನಮೂದಿಸಲಾಗುತ್ತದೆ









**ಪಾಸ್ ಪುಸ್ತಕ ಹಾಗೂ ಲೆಡ್ಜರ್ ಪುಸ್ತಕ**

ಈ ಬ್ಯಾಂಕ್ ನ ವಿಶೇಷತೆ ಎಂದರೆ ಈ ಎಲ್ಲಾ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವುದು ಶಾಲೆಯ ಮಕ್ಕಳೇ ,ಅದಕ್ಕೆಂದೇ ವಿದ್ಯಾರ್ಥಿಗಳಲ್ಲಿಯೇ ಒಬ್ಬ ಕ್ಯಾಶಿಯರ್,ಒಬ್ಬ ಮ್ಯಾನೇಜರ್ ಅನ್ನು ನೇಮಕ ಮಾಡಿ ಅವರ ಮೂಲಕ ವ್ಯವಹಾರಗಳನ್ನು ನಡೆಸಲಾಗುತ್ತಿದೆ.ಕಳೆದ 11 ತಿಂಗಳಿನಿಂದ ನಡೆಯುತ್ತಿರುವ ಈ ಮಕ್ಕಳ ಬ್ಯಾಂಕ್ ನಲ್ಲಿ ಈಗಾಗಲೇ ಸುಮಾರು 6000 ರೂ ಗಳಿಗೂ ಹೆಚ್ಚು ಠೇವಣಿ ಸಂಗ್ರಹವಾಗಿದೆ. ಇದರಿಂದ ಮಕ್ಕಳಲ್ಲಿ ಉಳಿತಾಯ ಮನೋಭಾವ ನಿರ್ಮಾಣ ಆಗಿದೆ,ಬ್ಯಾಂಕಿಂಗ್ ಪ್ರಕ್ರಿಯೆಯ ಜ್ಞಾನ ವೃದ್ಧಿಯಾಗಿದೆ,ಮಕ್ಕಳಲ್ಲಿ ವ್ಯವಹಾರ ಜ್ಞಾನ ಬೆಳೆದಿದೆ,ಉಳಿತಾಯ ಮೊತ್ತವನ್ನು ಬೇಕಾದಾಗ ಸದುಪಯೋಗ ಪಡಿಸಿಕೊಳ್ಳಬಹುದು,ಅನಿವಾರ್ಯತೆ ಬಂದಾಗ ಉಳಿತಾಯ ಪೋಷಕರಿಗೂ ಸದುಪಯೋಗವಾಗಿದೆ.






ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಶಾಲೆಯ ಬ್ಯಾಂಕ್ ಹಾಗೂ ಸತ್ಯದ ಅಂಗಡಿಯ ಬಗ್ಗೆ ಮೆಚ್ಚುಗೆಯ ಲೇಖನ ಪ್ರಕಟವಾಗಿತ್ತು ಹಾಗೂ ದೂರದರ್ಶನದ ಚಂದನ ವಾಹಿನಿ,ನ್ಯೂಸ್ 18 ಚಾನಲ್,"TORRENT SPREE"ಎನ್ನುವ ಫೇಸ್ಬುಕ್ ಪೇಜ್ ಗಳಲ್ಲಿ ಟ್ರೂ ಶಾಪ್,ಟ್ರೂಸ್ಕೂಲ್ ಬ್ಯಾಂಕ್ ಹಾಗೂ ಶಾಲೆಯ ಬಗ್ಗೆ ಪ್ರಶಂಸನಾ ವರದಿಗಳು ಬಿತ್ತರವಾಗಿದ್ದವು.

**ವಿಡಿಯೋ ಲಿಂಕ್ ಗಳು;**

ದೂರದರ್ಶನದ ಚಂದನ ವಾಹಿನಿ https://www.youtube.com/live/zXu6qUE3Oko?si=CVVcGstPWAUzpXSV

ನ್ಯೂಸ್ 18 ಚಾನಲ್- https://kannada.news18.com/news/jobs/education-chikkamagaluru-true-shop-in-kooduvalli-govt-school-mnc-irk-1783721.html?fbclid=IwY2xjawEh39ZleHRuA2FlbQIxMQABHXW5bu3XfZsduu_yzgRUY_8S4lcYicQEODc4SL-Ra987BEVazPWqX3ltMw_aem_NoWseNIQGQ7gZmMTONtv_Q

TORRENT SPREE' ಫೇಸ್ಬುಕ್ ಪೇಜ್

https://www.facebook.com/share/v/kEmdR1mRrXbCgedd/?mibextid=0aVxPL

ನ್ಯೂಸ್ 18 ಚಾನಲ್;-https://kannada.news18.com/news/jobs/education-chikkamagaluru-students-led-banking-in-govt-school-mnc-irk-1773247.html?fbclid=IwY2xjawEh3qVleHRuA2FlbQIxMQABHXqiZPcAO2bAT0H5woRdL

YLi1l_Vcju-C21hRx1ZlRGggiXTKslLtAf9GA_aem_ldg7SVwiOwBb8WXosBmKKA



VK ವಿಜಯ ಕರ್ನಾಟಕ
VIJAY KARNATAKA
Shivamogga Edition : 9-07-2024

# ಸರಕಾರಿ ಶಾಲೆಯಲ್ಲಿ ಬ್ಯಾಂಕ್, ಸತ್ಯದ ಅಂಗಡಿ!

## ಮಕ್ಕಳಲ್ಲಿ ವ್ಯವಹಾರ ಜ್ಞಾನ, ಸತ್ಯದರ್ಶನ ಮಾಡಿಸಲು ಶಿಕ್ಷಕರ ಮಾದರಿ ವರಸೆ

■ ಕೆ.ಎಚ್.ರುದ್ರಯ್ಯ ಚಿಕ್ಕಮಗಳೂರು
rudraiah4084@gmail.com

ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಉಳಿತಾಯ ಮನೋಭಾವವನ್ನು ಎಳೆವೆಯಿಂದಲೇ ಮೈಗೂಡಿಸುವ ನಿಟ್ಟಿನಲ್ಲಿ ತಾಲೂಕಿನ ಕೂದುವಳ್ಳಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬ್ಯಾಂಕಿಂಗ್ ಮತ್ತು ಮಕ್ಕಳ ಅಗತ್ಯ ವಸ್ತುಗಳಿಗೆ ಸತ್ಯದ ಅಂಗಡಿ ತೆರೆದು ಯಶಸ್ವಿ ನಿರ್ವಹಣೆ ನಡೆದಿದೆ.

ಈ ಶಾಲೆಯಲ್ಲಿ ತೆರೆದಿರುವ ಬ್ಯಾಂಕ್ ಸಣ್ಣದಾದ ವಹಿವಾಟು ನಡೆಸುತ್ತಿರಬಹುದು. ಆದರೆ, ಹಣ ಅಪವ್ಯಯ ಮಾಡದೆ ಅಪ್ಪ ಅಮ್ಮ ಕೊಟ್ಟಂತಹ ಮೊತ್ತದಲ್ಲಿ ಸ್ವಲ್ಪ ಉಳಿತಾಯ ಮಾಡಬೇಕು ಎಂಬ ಮನೋಭಾವನೆ ಬೆಳೆಸುವ ಬಹಳ ದೊಡ್ಡ ಕಾಳಜಿ ಅಡಗಿದೆ. ಹೀಗಾಗಿ ಮಕ್ಕಳು ಚಿಕ್ಕಂದಿನಿಂದಲೇ ಉಳಿತಾಯ ಮನೋಭಾವನೆ ಬೆಳೆಸಿಕೊಳ್ಳುತ್ತಿದ್ದಾರೆ.

ಕೂದುವಳ್ಳಿ ಸರಕಾರಿ ಶಾಲೆಯಲ್ಲಿ ಒಟ್ಟು 30 ಮಕ್ಕಳಿದ್ದಾರೆ. ಎಲ್ಲರೂ ಇಲ್ಲಿನ ಬ್ಯಾಂಕ್‌ನಲ್ಲಿ ಉಳಿತಾಯ ಮಾಡಿದ್ದಾರೆ. ಒಟ್ಟು 3 ಸಾವಿರ ರೂ.ಠೇವಣಿ ಸಂಗ್ರಹವಾಗಿದೆ. ಪ್ರತಿ ಮಗುವಿಗೂ ಒಂದೊಂದು ವೈಯಕ್ತಿಕ ಪಾಸ್ ಬುಕ್ ನೀಡಿ ಖಾತೆ ಸಂಖ್ಯೆ ನೀಡಲಾಗಿದೆ. ಹಣ ಕಟ್ಟಿದಾಗ ಲೆಡ್ಜರ್ ಮತ್ತು ವೈಯಕ್ತಿಕ ಪಾಸ್ ಬುಕ್‌ನಲ್ಲಿ ದಾಖಲಾಗಿ ಮಕ್ಕಳ ಹಣ ಎಲ್ಲಿಯೂ ವ್ಯತ್ಯಯವಾಗುವುದಿಲ್ಲ, ಬ್ಯಾಂಕಿಗೆ ಟ್ರೂ ಸ್ಕೂಲ್ ಬ್ಯಾಂಕ್ ಎಂದು ಹೆಸರಿಟ್ಟಿದ್ದು ಸದ್ಯಕ್ಕೆ ಮ್ಯಾನೇಜರ್ ಆಗಿ 5ನೇ ತರಗತಿಯ ಶ್ರವಣ್, ಕ್ಯಾಶಿಯರ್ ಆಗಿ ಧ್ರುವಣ್ ಕಾರ್ಯ ನಿರ್ವಹಿಸುತ್ತಾರೆ. ವಿದ್ಯಾರ್ಥಿಗಳು ಬೆಳಗ್ಗೆ 9 ಗಂಟೆಯಿಂದ 10ರ ವರೆಗೆ ಹಣ ಪಾವತಿ ಅಥವಾ ಡ್ರಾ ಮಾಡಬಹುದು. ತರಗತಿ ಅವಧಿಯಲ್ಲಿ ಬ್ಯಾಂಕ್ ಬಂದ್ ಆಗಿರುತ್ತದೆ.

ಉಳಿತಾಯ ಮಾಡಿದ ಹಣವನ್ನು ಮಕ್ಕಳು ತಮಗೆ ಅವಶ್ಯಕತೆ ಇದ್ದಾಗ ಡ್ರಾ ಮಾಡಿಕೊಳ್ಳಬಹುದು. ತಮ್ಮ ಪೋಷಕರಿಗೂ ಬಿಡಿಸಿಕೊಡಬಹುದು. ಒಬ್ಬೊಬ್ಬ ವಿದ್ಯಾರ್ಥಿ ಖಾತೆಯಲ್ಲಿ 150ರಿಂದ 300 ರೂ. ವರೆಗೆ ಠೇವಣಿ ಜಮೆಯಾಗಿದೆ.

ಚಿಕ್ಕಮಗಳೂರು ತಾಲೂಕಿನ ಕೂದುವಳ್ಳಿ ಶಾಲಾ ಮಕ್ಕಳೊಂದಿಗೆ ಶಿಕ್ಷಕರು.

ಕೂದುವಳ್ಳಿ ಸರಕಾರಿ ಶಾಲೆಯ ಟ್ರೂ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕ ಮತ್ತು ಕ್ಯಾಷಿಯರ್.

ಮಕ್ಕಳು ಅನಾವಶ್ಯಕವಾಗಿ ಖರ್ಚು ಮಾಡುವುದಕ್ಕೆ ಈಗಿನಿಂದಲೇ ಕಡಿವಾಣ ಹಾಕಿ ಅವರಲ್ಲಿ ಉಳಿತಾಯ ಮನೋಭಾವ ಮೂಡಿಸಬೇಕು ಎಂಬ ಉದ್ದೇಶದಿಂದ ಟ್ರೂ ಸ್ಕೂಲ್ ಬ್ಯಾಂಕ್ ತೆರೆದಿದ್ದೇವೆ. ಉತ್ತಮವಾದ ವಹಿವಾಟು ನಡೆಯುತ್ತಿದೆ. ಮಕ್ಕಳು ಕೂಡಿಟ್ಟ ಹಣ ಕೆಲವೊಮ್ಮೆ ಪೋಷಕರು ತುರ್ತು ಇದ್ದಾಗ ಬಿಡಿಸಿಕೊಂಡು ಹೋಗಿದ್ದಿದೆ. ಒಟ್ಟಾರೆ ಮಕ್ಕಳ ಅಗತ್ಯಕ್ಕೆ ಸಹಕಾರಿಯಾಗಿದೆ.
- ಜಯಮ್ಮ, ಮುಖ್ಯ ಶಿಕ್ಷಕಿ.

ಸುಳ್ಳು, ಅಪ್ರಮಾಣಿಕತೆ ಮಕ್ಕಳ ಮುಂದಿನ ಜೀವನದಲ್ಲಿ ಬರಲೇ ಬಾರದು ಎಂಬ ಕಾರಣಕ್ಕೆ ಮಕ್ಕಳೇ ಶಾಪಿಂಗ್ ಮಾಡಿ ಅವರೇ ಡಬ್ಬದಲ್ಲಿ ಹಣ ಹಾಕುವಂತೆ ಟ್ರೂ ಶಾಪ್ ಮಾಡಿದ್ದೇವೆ. ಇಲ್ಲಿಯವರೆಗೆ ಯಾರೂ ಹಣ ಹಾಕದೆ ಯಾವ ವಸ್ತುವನ್ನೂ ತೆಗೆದುಕೊಂಡಿಲ್ಲ.
- ಪ್ರೇಮ, ಸಹ ಶಿಕ್ಷಕಿ

### ಸ್ವತಂತ್ರ ನಿರ್ವಹಣೆಯ ಟ್ರೂ ಶಾಪ್

ಮಕ್ಕಳಲ್ಲಿ ಚಿಕ್ಕಂದಿನಲೇ ಸತ್ಯ, ಪ್ರಾಮಾಣಿಕತೆ ಮೈಗೂಡಿಸುವ ಉದ್ದೇಶದಿಂದ ಈ ಶಾಲೆಯಲ್ಲಿ ಒಂದು ಸತ್ಯದ ಅಂಗಡಿ ತೆರೆಯಲಾಗಿದೆ. ಈ ಅಂಗಡಿ ವಹಿವಾಟು ನಡೆಸಲು ಯಾರೂ ಇರುವುದಿಲ್ಲ, ಮಕ್ಕಳ ಅಗತ್ಯ ಪಾಠೋಪಕರಣಗಳಾದ ಪೆನ್ನು, ಪೆನ್ಸಿಲ್, ರಬ್ಬರ್, ಶಾರ್ಪ್‌ನರ್ ಮತ್ತಿತರೆ ಅಗತ್ಯ ವಸ್ತುಗಳನ್ನು ಪ್ರತ್ಯೇಕವಾಗಿ ಡಬ್ಬಗಳಲ್ಲಿ ಹಾಕಿಡಲಾಗಿದೆ. ಆ ವಸ್ತುಗಳ ರಿಯಾಯಿತಿ ದರವನ್ನು ಡಬ್ಬಗಳ ಮೇಲೆ ನಮೂದಿಸಲಾಗಿದೆ. ಮಕ್ಕಳು ತಾವೇ ಬಂದು ತಮಗೆ ಬೇಕಿದ್ದ ವಸ್ತು ಪಡೆದು ನಿಗದಿತ ದರವನ್ನು ಡಬ್ಬಿಯಲ್ಲಿ ಹಾಕಬೇಕು. ಒಂದು ವೇಳೆ ಹಣ ಕಡಿಮೆ ಇದ್ದಲ್ಲಿ ಮತ್ತೊಮ್ಮೆಯೂ ಹಾಕಲು ಅವಕಾಶವಿದೆ. ಮಕ್ಕಳಿಗೆ ಅಗತ್ಯ ವಸ್ತುಗಳು ಬೇಕಾಗಿದ್ದಲ್ಲಿ ಬೆಳಗ್ಗೆಯೇ ಟ್ರೂ ಸ್ಕೂಲ್ ಬ್ಯಾಂಕಿನಲ್ಲಿ ಹಣ ಡ್ರಾ ಮಾಡಿಕೊಂಡಿರಬೇಕು. ಮಕ್ಕಳಲ್ಲಿ ಅಸತ್ಯ, ಅಪ್ರಮಾಣಿಕತೆ ಸುಳಿಯಬಾರದು. ಅವರನ್ನು ಪ್ರಾಮಾಣಿಕತೆಯ ಮಾರ್ಗದಲ್ಲಿ ಕೊಂಡೊಯ್ಯಬೇಕು ಎನ್ನುವ ಸಂದೇಶ ಟ್ರೂ ಶಾಪ್ ಹಿಂದಿದೆ. ಜಿಲ್ಲೆಯಲ್ಲೇ ಇದೊಂದು ಪ್ರಥಮ ಪ್ರಯತ್ನವಾಗಿದೆ. ಜತೆಗೆ ಯಶಸ್ವಿಯೂ ಆಗಿದ್ದು, ಇತರೆ ಶಾಲೆಗಳಿಗೆ ಮಾದರಿಯಾಗಿ, ಸರಕಾರಿ ಶಾಲೆಗಳತ್ತ ಪೋಷಕರು ಮುಖಮಾಡುವಂತಾಗಲಿ ಎಂಬ ಆಶಯ ಅಡಗಿಸಿಕೊಂಡಿದೆ.

## 3.ಪ್ರಾರ್ಥನಾ ಸಮಯದಲ್ಲಿ ವಿನೂತನ ಪ್ರಯತ್ನಗಳು



ಸಾಮಾನ್ಯ ಜ್ಞಾನವೃದ್ಧಿಗಾಗಿ, ಭಾಗವಹಿಸುವಿಕೆಯನ್ನು ಉತ್ತೇಜಿಸಲು,ಆತ್ಮವಿಶ್ವಾಸ ಬೆಳೆಸುವ ನಿಟ್ಟಿನಲ್ಲಿ,ಸಭಾಕಂಪನ ದೂರ ಮಾಡಲು ಪ್ರಾರ್ಥನಾ ಅವಧಿಯಲ್ಲಿ ಹಲವು ಪ್ರಯತ್ನಗಳನ್ನು ಮಾಡಲಾಗಿದೆ. ಪ್ರತಿನಿತ್ಯ **ಸುಭಾಷಿತ, ದಿನಕ್ಕೊಂದು ಗಾದೆ ಹಾಗೂ ಅದರ ಅರ್ಥ ವಿವರಣೆ,ದಿನಪತ್ರಿಕೆ ಓದುವುದು,ಪ್ರತಿನಿತ್ಯ 5 ಒಗಟು ಬಿಡಿಸುವುದು, 5 ರಸಪ್ರಶ್ನೆಗಳಿಗೆ ಉತ್ತರಿಸುವುದು,ರಾಷ್ಟ್ರ ನಾಯಕರ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಹೆಸರು ಹೇಳಿಸುವುದು, ಭಾರತದ ರಾಜ್ಯಗಳ ಹಾಗೂ ಅವುಗಳ ರಾಜಧಾನಿಗಳ ಹೆಸರು ಹೇಳಿಸುವುದು,ಜಿಲ್ಲೆ, ರಾಜ್ಯ ಇವುಗಳ ಭೌಗೋಳಿಕ ಪರಿಚಯ,ಮಕ್ಕಳಿಗೆ ಸಂವಿಧಾನದ ಪೀಠಿಕೆಯ ಪ್ರತಿಜ್ಞೆ** ಮಾಡಿಸಲಾಗುತ್ತದೆ.

## 8.ಚಟುವಟಿಕೆಗಳು/ಕಾರ್ಯಕ್ರಮಗಳು ಹಾಗೂ ಅನುದಾನ.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ **ಅನುಭವಾತ್ಮಕ ಕಲಿಕೆ**ಯ ಭಾಗವಾಗಿ ಮಕ್ಕಳಿಗೆ ಸಂತೆ, ಅಂಚೆ ಕಚೇರಿ, ಡಿಜಿಟಲ್ ಗ್ರಂಥಾಲಯ,ಕೃಷಿ ಚಟುವಟಿಕೆಯ ವೀಕ್ಷಣೆಗಾಗಿ ಭತ್ತದ ಗದ್ದೆ ಕಾಫಿ ತೋಟಕ್ಕೆ ಭೇಟಿಯಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

.



ಸಂತೆ ಭೇಟಿ

ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ಬೆಳೆಸುವ ನಿಟ್ಟಿನಲ್ಲಿ ಶಾಲಾ ಪ್ರಾರ್ಥನಾ ಅವಧಿಯ ನಂತರ ಪ್ರತಿದಿನ ತರಗತಿ ಪ್ರಾರಂಭಿಸುವ ಮೊದಲು 5 ನಿಮಿಷ **ಭಗವದ್ಗೀತೆಯ ಶ್ಲೋಕಗಳು,ಹನುಮಾನ್ ಚಾಲೀಸಾ, ನಿರ್ವಾಣ ಶತಕ,ಸರ್ವಧರ್ಮ ಪ್ರಾರ್ಥನೆ**ಗಳನ್ನು ವಾರದಲ್ಲಿ ಒಂದರಂತೆ ಹೇಳಿಸಲಾಗುತ್ತಿದೆ



ಆರೋಗ್ಯ ಕಾರ್ಯಕರ್ತೆಯರಿಂದ ಆರೋಗ್ಯ ಜಾಗೃತಿ ಕಾರ್ಯಕ್ರಮ ,ಮೆಟ್ರಿಕ್ ಮೇಳ, ಕಿರುನಾಟಕಗಳ ಪ್ರದರ್ಶನ.

**ಸಂಭ್ರಮ ಶನಿವಾರ**ದ ಭಾಗವಾಗಿ ಮೆಟ್ರಿಕ್ ಮೇಳ, ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆಯ ಚಿತ್ರಗಳನ್ನುಬಿಡಿಸುವ ಸ್ಪರ್ಧೆ,ಪೌಷ್ಟಿಕತೆ ಸ್ವಾಸ್ಥ್ಯ ಮತ್ತು ಶುಚಿತ್ವ ಬಗ್ಗೆ ಆರೋಗ್ಯ ಕಾರ್ಯಕರ್ತೆಯರಿಂದ ಮಾಹಿತಿ ಹಂಚಿಕೆ. ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿಗಳು ಎಂಬ ವಿಷಯದ ಭಾಗವಾಗಿ ಸಾರ್ವಜನಿಕ ಬಾವಿ.ಬಸ್ ನಿಲ್ದಾಣಗಳಿಗೆ ಭೇಟಿ,ರಸ್ತೆ ಸುರಕ್ಷತೆಯ ಬಗ್ಗೆ ಕಿರು ನಾಟಕ ಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.




**ರೀಡಿಂಗ್ ಕಾರ್ನರ್**

ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿ 2022-23 ಹಾಗೂ 2023-24ನೇ ಸಾಲಿನ 10,000ಗಳಲ್ಲಿ ಗ್ರಂಥಾಲಯ ಪುಸ್ತಕ ಖರೀದಿಸಿ ಶಾಲೆಯಲ್ಲಿ ರೀಡಿಂಗ್ ಕಾರ್ನರ್ ನಿರ್ಮಾಣ ಮಾಡಿ ಗ್ರಂಥಾಲಯದ ಸದ್ಬಳಕೆ ಮಾಡಲಾಗುತ್ತಿದೆ.

ಶಾಲೆ ಪ್ರಾರಂಭವಾದ 50 ವರ್ಷಗಳ ನೆನಪಿಗಾಗಿ 2022 ರಲ್ಲಿ ಶಾಲಾ ಸುವರ್ಣ ಸಂಭ್ರಮ ಕಾರ್ಯಕ್ರಮ ಹಾಗೂ ಪ್ರತಿಭಾ ಕಾರಂಜಿಯನ್ನು ಇಡೀ ಊರಿನ ಜನರ ಸಹಕಾರದೊಂದಿಗೆ ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಜಿಲ್ಲಾ ಕಾನೂನು ಪ್ರಾಧಿಕಾರ ಚಿಕ್ಕಮಗಳೂರು ಹಾಗೂ ಸರ್ವೋದಯ ಸಮಾಜ ಸೇವಾ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಸಿ ಸಾಧನೆ ಮಾಡಿದ ಸ್ಥಳೀಯ ಮಹಿಳಾ ವಿದ್ಯಾರ್ಥಿಗಳಿಗೆ,ಸಾಧಕರಿಗೆ ಸನ್ಮಾನ ಮಾಡಲಾಯಿತು ಹಾಗೂ ಸರ್ವೋದಯ ಸಮಾಜ ಸೇವೆ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ 2023 - 24ರ ಏಪ್ರಿಲ್ ತಿಂಗಳಿನಲ್ಲಿ 10 ದಿನಗಳ ಬೇಸಿಗೆ ಶಿಬಿರವನ್ನು ಶಾಲೆಯಲ್ಲಿ ನಡೆಸುವುದರ ಮೂಲಕ ತರಗತಿ ಆಚೆಗಿನ ಹೊಸ ಜೀವನ ಕೌಶಲಗಳನ್ನು ಕಲಿಯಲು ಅನುವು ಮಾಡಿಕೊಡಲಾಗಿದೆ.


ಕೂದುವಳ್ಳಿ ಶಾಲೆ; ಸುವರ್ಣ ಮಹೋತ್ಸವ


ಕೂದುವಳ್ಳಿ: ಮಹಿಳಾ ದಿನಾಚರಣೆ


ಮಕ್ಕಳ ಬೇಸಿಗೆ ಶಿಬಿರ

ಪ್ರಸ್ತುತ 2024-25 ನೇ ಸಾಲಿನಲ್ಲಿ 28 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ಈ ಭಾಗದ ಇತರ ಶಾಲೆಗಳಿಗೆ ಹೋಲಿಸಿದರೆ ಉತ್ತಮ ದಾಖಲಾತಿಯನ್ನು ಹೊಂದಿದೆ.ನಮ್ಮ ಶಾಲೆ ತಾಲ್ಲೂಕು ಕೇಂದ್ರದಿಂದ 13 ಕಿಲೋ ಮೀಟರ್ ಹೋಬಳಿ ಕೇಂದ್ರದಿಂದ 5 km ದೂರದಲ್ಲಿದ್ದರೂ ಪಟ್ಟಣದ ಯಾವುದೇ ಖಾಸಗಿ ಶಾಲೆಗಳಿಗೆ ಹಾಗೂ ಸುತ್ತಲ ಇತರ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಪ್ರಗತಿಯತ್ತ ಸಾಗುತ್ತಿದೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನ ಅವಕಾಶಗಳನ್ನು ನೀಡಲಾಗಿದ್ದು. ಕನ್ನಡ ಮಾಧ್ಯಮ ಶಾಲೆಯಾದರೂ ಆಂಗ್ಲ ಭಾಷಾ ಕಲಿಕೆಗೆ ಹೆಚ್ಚಿನ ಅವಕಾಶ ನೀಡಲಾಗಿದೆ.ಮುಖ್ಯ ಶಿಕ್ಷಕಿ ಜಯಮ್ಮ S.P ಸಹ ಶಿಕ್ಷಕಿ ಪ್ರೇಮಾ N.A ಅವರು ಕ್ರಿಯಾಶೀಲ ಶಿಕ್ಷಕರಾಗಿದ್ದು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ.ಈ ಶಾಲೆಯು ಇಲಾಖೆ ಹಾಗೂ ಸಮುದಾಯದ ಸಹಕಾರದೊಂದಿಗೆ ಉತ್ತಮ ಅಭ್ಯಾಸಗಳು ಹಾಗೂ ನಾವೀನ್ಯಯುತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ "ನಮ್ಮ ಶಾಲೆ ನಮ್ಮ ಹೆಮ್ಮೆ" ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಗತಿಯತ್ತ ಸಾಗುತ್ತಿದೆ.